ಫಾರೆಸ್ಟ್.

ಇಸ್ತಿಹಾರ್ನಾಮೆ.

ತಾರೀಖು 17ನೆ ಅಗಸ್ಟು 1903.

ನಂ. 119—1317, ಸ|| 1900ನೆ ಇಸವಿಯ XIನೆ ನಂಬರಿ ಮೈಸೂರು ಸೀಮೆಯ ಫಾರೆಸ್ಟು ರೆಗ್ಯುಲೇಷನ್ 17ನೆ ಸೆಕ್ಷನಿನ ವಿಧಿಗಳನುಸರಿಸಿ ಮೈಸೂರು ಸೀಮೆಯ ಫಾನವನ್ನೈದಿದ ಶ್ರೀಮಂತ ಮಹಾರಾಜಾ ಸರ್ಕಾರದವರು ಪ್ರಸಿದ್ಧಪಡಿಸುವದೇನಂದರೆ, ಈ ಇಸ್ತಿಹಾರ್ನಾಮೆಗೆ ಜಂಟಿಸಿರುವ ಷೆಡ್ಯೂಲಿನಲ್ಲಿ ನಮೂದಿಸಿರುವ ಜಕ್ಕು ಬಂದಿಯುಳ್ಳ ಪ್ರದೇಶವು 1903ನೆ ಸೆಪ್ಟೆಂಬರ್ ಗುರ್ರೆ ಲಾಗಾಯತು ಪದರಿ ಇಸ್ತಿಹಾರಿನ ಅಡೀಲಿ ವಿವರಿಸಿರುವ ಹಕ್ಕುಗಳ ಜಲಾವಣೆಗೆ ಬಳಪಟ್ಟು ಸ್ಟೇಟ್ ಫಾರೆಸ್ಟಾಗಿರತಕ್ಕದ್ದೆಂದು ಎಣಿಸಲ್ಪಟ್ಟಿರುತ್ತೆ :—

ಷೆಡ್ಯೂಲ್.

ಜಿಲ್ಲೆಯ ಹೆಸರು.	ತಾಲ್ಲೂಕಿನ ಹೆಸರು ಮತ್ತು ಗ್ರಾಮದ ಹೆಸರು.	ಸರ್ವೆ ನಂಬರು ಮತ್ತು ಫೀಲ್ಡ್ ನಂಬರ್.	ಪ್ರಾಂತ್ಯದ ಹೆಸರು.	ಜಕ್ಕು ಬಂದಿ.
ಚಿತ್ರದುರ್ಗ.	ಹೊಳಲ್ಕೆರೆ ತಾಲ್ಲೂಕು.	ಬೆಟ್ಟದ ಮೈಲಿ.	ಗರ್ಗಾಕಾವಲ್.	ಉತ್ತರಕ್ಕೆ.—ಗರ್ಗಾ ಗ್ರಾಮದ ಸರ್ವೆ ನಂ. 1ರ ನೈರುತ್ಯ ಮೂಲೆಯಿಂದ ಹೊರಟು ಲೈನು ಸದರೀ ಗ್ರಾಮದ ಸರ್ವೆ ನಂ. 1, 2, 12 ವ 13 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ತರುವಾಯ ಗರ್ಗದ ಸರ್ವೆ ನಂ. 16, ಗಿಲ್ಕೈನಹಳ್ಳಿಯ ಸರ್ವೆ ನಂ. 44, 43 ವ 42 ಮತ್ತು ಹಾಲೇಹಳ್ಳಿಯ ಸರ್ವೆ ನಂ. 41 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆದರ ಕೇವಲ ದಕ್ಷಿಣ ಮೂಲೆಗೆ ಹೋಗುತ್ತದೆ. ಆಮೇಲೆ ಹಾಲೆಹಳ್ಳಿಯ ಸರ್ವೆ ನಂ. 59ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಹೊಳಲಕೆರೆಯ ಸರ್ವೆ ನಂ. 276ರ ಈಶಾನ್ಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ದಕ್ಷಿಣಕ್ಕೆ.—ತರುವಾಯ ಹೊಳಲಕೆರೆಯ ಸರ್ವೆ ನಂ. 276ರ ಉತ್ತರ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 274ರ ಆಗ್ನೇಯ ಮೂಲೆಯನ್ನು ಮುಟ್ಟುವ ಸ್ಥಳಕ್ಕೆ ಹೋಗುತ್ತದೆ. ಪಶ್ಚಿಮಕ್ಕೆ.—ಆಮೇಲೆ ಹೊಳಲಕೆರೆಯ ಸರ್ವೆ ನಂ. 274 ವ 273, ಚೀರನಹಳ್ಳಿಯ ಸರ್ವೆ ನಂ. 27, ಜೆಟ್ಟಿಹಳ್ಳಿಯ ಸರ್ವೆ ನಂ. 12 ಮತ್ತು ಹಾರೇನಹಳ್ಳಿಯ ಸರ್ವೆ ನಂ. 30 ಇವುಗಳ ಪೂರ್ವ ಪಾರ್ಶ್ವದ ಉದ್ದಕ್ಕೂ ಹೋಗಿ ಹೊರಟ ಸ್ಥಳವನ್ನು ಸೇರುತ್ತದೆ.

ಷರಾ. ಎ.—ಹಾದಿಯು ಇದರಡೀ ಕಂಡ ಹಕ್ಕುಗಳು ಬ್ಲಾಕಿನಲ್ಲಿ ಹಂಗಾಮಿಯಾಗಿ ಕೊಡಲ್ಪಟ್ಟಿರುತ್ತವೆ :—

(1) ಹೊಳಲಕೆರೆ ಮತ್ತು ಹಾಲೆಹಳ್ಳಿ ಗ್ರಾಮಗಳಿಂದ ಗರ್ಗಾ ಕಾವಲಿನ ಸರ್ವೆ ನಂ. 1ರ ಆಗ್ನೇಯ ಮೂಲೆಯಲ್ಲಿರುವ ಆಂಜನೇಯ ದೇವಸ್ಥಾನದವರಿಗೆ ಸುಮಾರು 1 ಫರ್ಲಾಂಗಿನ ಉದ್ದವಾದ ಮತ್ತು 8 ಅಡಿಗಳ ಅಗಲವುಳ್ಳ ಕಾಲಹಾದಿಯು ಜನಗಳಿಗೂ ವ ದನಗಳಿಗೂ ಬಿಟ್ಟಿರುತ್ತದೆ. ಈ ಹಾದಿಯು ಸ್ಟೇಟ್ ಫಾರೆಸ್ಟನ್ನು ಹೊಳಲಕೆರೆಯ ಸರ್ವೆ ನಂ. 276ರ ಈಶಾನ್ಯ ಮೂಲೆಯ ಬಾಂದಿನಿಂದ ಸುಮಾರು 100 ಗಜಗಳ ಫಾನಲೆಯಲ್ಲಿ ಪ್ರವೇಶಿಸಿ ಹೊಳಲಕೆರೆಯ ಸರ್ವೆ ನಂ. 276ರ ಈಶಾನ್ಯ ಮೂಲೆಯಿಂದ ಉತ್ತರಕ್ಕೆ ಸುಮಾರು 50 ಗಜಗಳ ಫಾನಲೆಯಲ್ಲಿ ಹಾಲೆಹಳ್ಳಿಯ ಸರ್ವೆ ನಂ. 59ರ ಪಶ್ಚಿಮ ಪಾರ್ಶ್ವದಲ್ಲಿ ಸ್ಟೇಟ್ ಫಾರೆಸ್ಟನ್ನು ಬಿಡುತ್ತದೆ.

(2) ಗಿಲ್ಕೈನ ಹಳ್ಳಿಯಿಂದ ಅರಸೀಘಟ್ಟದ ವರೆಗೆ 12 ಅಡಿಗಳ ಅಗಲವುಳ್ಳ ಭಂಡಿ ಜಾಡು ಜನಗಳಿಗೂ, ದನಗಳಿಗೂ ಮತ್ತು ಭಂಡಿಗಳಿಗೂ ಬಿಟ್ಟಿರುತ್ತೆ. ಈ ಭಂಡಿ ಜಾಡು ಗಿಲ್ಕೈನಹಳ್ಳಿಯ ಸರ್ವೆ ನಂ. 44ರ ಪಶ್ಚಿಮ ಪಾರ್ಶ್ವದಲ್ಲಿ ಅದರ ಈಶಾನ್ಯ ಮೂಲೆಯಿಂದ ಸುಮಾರು $3\frac{1}{2}$ ಫರ್ಲಾಂಗುಗಳ ಫಾನಲೆಯಲ್ಲಿ ಫಾರೆಸ್ಟನ್ನು ಪ್ರವೇಶಿಸಿ ವಾಯುವ್ಯ ದಿಕ್ಕಾಗಿ ಸುಮಾರು ಅರ್ಧಮೈಲಿ ದೂರ ಹೋಗಿ ಗರ್ಗಾ ಗ್ರಾಮದ ಸರ್ವೆ ನಂ. 12ರ ನೈರುತ್ಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(3) ಗಿಲ್ಕೈನಹಳ್ಳಿಯಿಂದ ಹಾರೇನಹಳ್ಳಿ ವರಿವಿಗೆ 12 ಅಡಿ ಅಗಲವುಳ್ಳ ಭಂಡಿ ಜಾಡು ಜನಗಳಿಗೂ, ದನಗಳಿಗೂ ಮತ್ತು ಭಂಡಿಗಳಿಗೂ ಬಿಟ್ಟಿರುತ್ತೆ. ಈ ಭಂಡಿ ಜಾಡು ಸ್ಟೇಟ್ ಫಾರೆಸ್ಟನ್ನು ಗಿಲ್ಕೈನಹಳ್ಳಿಯ ಸರ್ವೆ ನಂ. 43ರ ಪಶ್ಚಿಮ ಪಾರ್ಶ್ವದಲ್ಲಿ ಅದರ ವಾಯುವ್ಯ ಮೂಲೆಯಿಂದ ಸುಮಾರು 150 ಗಜಗಳ ಫಾನಲೆಯಲ್ಲಿ ಪ್ರವೇಶಿಸಿ ಪಶ್ಚಿಮದಿಕ್ಕಾಗಿಯೂ ವಾಯುವ್ಯ ದಿಕ್ಕಾಗಿಯೂ ಸುಮಾರು 1 ಮೈಲಿ ಹೋಗಿ ಹಾರೇನಹಳ್ಳಿಯ ಸರ್ವೆ ನಂ. 30ರ ಪೂರ್ವ ಪಾರ್ಶ್ವದಲ್ಲಿ ಅದರ ಆಗ್ನೇಯ ಮೂಲೆಯಿಂದ ಸುಮಾರು 200 ಗಜಗಳ ಫಾನಲೆಯಲ್ಲಿ ಸ್ಟೇಟ್ ಫಾರೆಸ್ಟನ್ನು ಬಿಡುತ್ತದೆ.

(4) ಗಿಲ್ಕೈನಹಳ್ಳಿಯಿಂದ ಚೀರನಹಳ್ಳಿ ವರಿವಿಗೆ 6 ಅಡಿಗಳ ಅಗಲವುಳ್ಳ ಕಾಲಹಾದಿಯು ಜನಗಳಿಗೂ ಮತ್ತು ದನಗಳಿಗೂ ಬಿಟ್ಟಿರುತ್ತೆ. ಈ ಹಾದಿಯು ಫಾರೆಸ್ಟನ್ನು ಗಿಲ್ಕೈನಹಳ್ಳಿಯ ಸರ್ವೆ ನಂ. 42ರ ಪಶ್ಚಿಮ ಪಾರ್ಶ್ವದಲ್ಲಿ ಅದರ ವಾಯುವ್ಯ ಮೂಲೆಯ ಬಾಂದಿನಿಂದ ಸುಮಾರು 100 ಗಜಗಳ ಫಾನಲೆಯಲ್ಲಿ ಪ್ರವೇಶಿಸಿ ಪಶ್ಚಿಮ ದಿಕ್ಕಾಗಿ ಸುಮಾರು 1 ಮೈಲಿ ದೂರ ಹೋಗಿ ಚೀರ್ನಹಳ್ಳಿಯ ಸರ್ವೆ ನಂ. 27ರ ಆಗ್ನೇಯ ಮೂಲೆಯಿಂದ ಸುಮಾರು 2 ಫರ್ಲಾಂಗುಗಳ ಫಾನಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

ಬಿ. ಇದರಡೀ ಕಂಡ ಹಕ್ಕುಗಳು ಬ್ಲಾಕಿನಲ್ಲಿ ಕೊಡಲ್ಪಟ್ಟಿರುತ್ತವೆ :—

ಗರ್ಗಾ ಕಾವಲಿನ ಸರ್ವೆ ನಂ. 1ರ ಆಗ್ನೇಯ ಮೂಲೆಯಲ್ಲಿರುವ ಆಂಜನೇಯ ದೇವಸ್ಥಾನದ ಸವಿಾಪದಲ್ಲಿ $1\frac{1}{2}$ ಎಕರೆ ಪುಳ್ಳ ದಂಡು ಇಳಿಯುವ ಭೂಮಿಯು ಬಿಡಲ್ಪಟ್ಟು ಆವರ್ಣವಾಗಿ ಎಣಿಸಲ್ಪಟ್ಟಿರುತ್ತದೆ.

ಹುಕುಂ ಬಮೋಜೇಬ್,

ಎಂ. ಮುತ್ತಂಣ,

ಫಾರೆಸ್ಟ್ ಇಲಾಖೆಯ ಗವರ್ನಮೆಂಟ್ ಅಫೀಷಿಯೇಟಿಂಗ್ ಸೆಕ್ರೆಟರಿ.